ದಿನಾಂಕ: 12 .06.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಕೆ ವಿ ಡಿ ವಕೀಲರಿಂದಃ**

ವಾದಿಯ ತಂದೆ ಹೆಸರು ಕೆಂಚಪ್ಪ . ವಾದಿಯ ತಾಯಿ ಹೆಸರು ರಂಗಮ್ಮ. ವಾದಿಯ ತಂದೆಗೆ ಒಟ್ಟು 5 ಜನ ಮಕ್ಕಳು. ಅವರ ಹೆಸರು ಮೈಲಪ್ಪ, ಪುಟ್ಟಮ್ಮ , ನಿಂಗಪ್ಪ , ಗಂಗಮ್ಮ, ಲಕ್ಷ್ಮಕ್ಕ. ವಾದಿಗಳೆಲ್ಲರ ಮದುವೆ ಸುಮಾರು 35 ರಿಂದ 40 ವರ್ಷಗಳ ಹಿಂದೆ ಆಗಿದೆ. ದಾವಾಸ್ತಿ ಕೆಂಚಪ್ಪನವರಿಗೆ ಯಾವ ರೀತಿ ಬಂದಿದೆ ಎಂದು ಗೊತ್ತು. ಕೆಂಚಪ್ಪನವರು ದಾವಾಸ್ತಿಯನ್ನು ನಮ್ಮ ಊರಿನ ಶಾನಬೋಗ ತಿಪ್ಪೇರುದ್ರಯ್ಯನವರಿಂದ ಕೊಂಡುಕೊಂಡಿದ್ದರು. ದಾವಾಸ್ತಿ ಕೆಂಚಪ್ಪನವರ ಸ್ವಯಾರ್ಜಿತ ಆಸ್ತಿ ಎಂದರೆ ನಿಜ.

ವಾದಿ ಗಂಡನ ಮನೆಯಲ್ಲಿ ಇದ್ದಾರೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಬಂದು ಹೋಗುತ್ತಾರೆ ಎಂದು ನುಡಿಯುತ್ತಾರೆ. ವಾದಿಯ ತಂದೆ ಕೆಂಚಪ್ಪನಿಗೆ ಒಟ್ಟು ಎಷ್ಟು ಆಸ್ತಿಗಳು ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ವಾದಿಯರು ದಾವಾಸ್ತಿಯನ್ನು ಜಂಟಿಯಾಗಿ ಅನುಭವಿಸುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. **20.07.2018** ರಲ್ಲಿ ವಾದಿಯರು ಮತ್ತು ಪ್ರತಿವಾದಿಗಳು ಪಾಲುವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅದೇ ದಿನ ಎಲ್ಲಾ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಒಟ್ಟು ಕುಟುಂಬದ ಆಸ್ತಿಯನ್ನು ಭಾಗ ಮಾಡಿಕೊಂಡ ವಿಚಾರ ವಾದಿ ನನಗೆ ತಿಳಿಸಿರುವುದಿಲ್ಲ.

**20.07.2018** ರಂದು ಆದ ಪಾಲುವಿಭಾಗದಲ್ಲಿ **3** ಜನ ವಾದಿಗಳು ತಲಾ ರೂ. **1** ಲಕ್ಷ ಹಣ ಪಡೆದುಕೊಂಡು ತಮಗೆ ಆಸ್ತಿ ಬೇಡ ಎಂದು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆಸ್ತಿಯು ಕೆಂಚಪ್ಪನವರ ಸ್ವಯಾರ್ಜಿತ ಆಸ್ತಿಯಾಗಿದ್ದರಿಂದ ಮೊಮ್ಮಕ್ಕಳಿಗೆ ವಿಲ್ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಊರಿನಲ್ಲಿ ಪಂಚಾಯತಿ ಸೇರಿಸಿದ್ದರು ಎಂದು ನಾನು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ತಿಯನ್ನು ಕೆಂಚಪ್ಪನ ಮೊಮ್ಮಕ್ಕಳು ವಿಲ್ ನಾಮೆ ಆಧಾರದ ಮೇಲೆ ಅನುಭವಿಸಿಕೊಂಡು ಹೋಗುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿಗಳು ಮತ್ತು ನಾನು ಅನ್ಯೂನ್ಯವಾಗಿದ್ದರಿಂದ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ಈಗಾಗಲೇ ಭಾಗ ತೆಗೆದುಕೊಂಡಿರುವುದರಿಂದ ವಾದಿಗಳಿಗೆ ಯಾವುದೇ ಹಕ್ಕು ಸ್ವಾದೀನ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು